## ಮಾತು-ಕತೆ

ಧಾರಾವಾಡ (ಧಾರಾನಗರಿ) 'ವಿದ್ಯಾಕಾಶಿ' ಎಂಬುದು ಉತ್ಪ್ರೇಕ್ಷೆಯಲ್ಲ. ಅದು ವಾಸ್ತವ. ನಗರೀಕರಣದ ಬೆಳವಣಿಗೆ, ರಾಜಕೀಯದ ಅತಾತ್ವಿಕ ಗದ್ದಲ, ಜಾಗತೀಕರಣದ ಒಳಹರಿವು ಇಲ್ಲಿನ ಸಾಂಸ್ಕೃತಿಕ ಬದುಕಿನ ಮೇಲೆ ದಾಳಿ ನಡೆಸುತ್ತಿದ್ದರೂ ಕನ್ನಡತ್ವ ಇಲ್ಲಿ ಮಂಕಾಗಿಲ್ಲ. ಸಾಧನೆ ಮಾಡಬೇಕೆನ್ನುವವರಿಗೆ ಇದು ಪ್ರಶಸ್ತವಾದ ಸ್ಥಳವಾಗಿದೆ. ನೀವು ಗುರುತಿಸಿದಂತೆ ಅತ್ತ ಸಾಧನಕೇರಿಯ ಸಾಧಕ ಬೇಂದ್ರೆ, ಇತ್ತ ಕಲ್ಯಾಣನಗರದ ಕವಿ ಕಣವಿ–ಇವರೀರ್ವರು ನನಗೆ ದಿಕ್ಸೂಚಿಸುವ ಎರಡು ಧ್ರುವಬಿಂದುಗಳು. ನಾನು ಪ್ರವೃತ್ತಿಯಿಂದ ಸಾಧಕನೆ. ಈ 'ಸಾಧಕ' ಪದ ಯಾವ ಸಾಧನೆಗೂ ಅನ್ವಯಿಸುವಂತಹದಾದರೂ, ಅದು ಮೂಲತಃ ಆಧ್ಯಾತ್ಮಿಕ ಸಾಧನೆಯನ್ನೇ ಸೂಚಿಸುವಂತಹದು. ಈ ಸೂಚಕತೆಯಲ್ಲಿಯೇ 'ಶ್ರೀಮಾತಾ' ಅವರ ಪರಮಭಕ್ತರಾದ ಅಂಬಿಕಾತನಯರು ಕಾವ್ಯಲೋಕದಲ್ಲಿದ್ದೂ ಶ್ರೀಮಾತಾರವಿಂದರ ಸಾಧನೆಗೆ ಮಾರುಹೋದವರು.

ಕಲ್ಯಾಣನಗರದ ಕವಿ ಕಣವಿ ಬಸವಣ್ಣವರ 'ಕಲ್ಯಾಣ'ವನ್ನು ನೆನಪಿಸುವಂತವರು. ಬಸವಣ್ಣನವರು ಭಕ್ತಿಭಾಂಡಾರಿಗಳಾಗಿರುವಂತೆ ವಿನಯಭಾಂಡಾರಿಗಳೂ ಆಗಿದ್ದರು. ಕವಿ ಕಣವಿ ವಿನಯ ಸಂಪನ್ನರಾಗಿರುವುದನ್ನೂ ಯಾರೂ ಗುರುತಿಸಬಹುದು. ಅವರಲ್ಲಿರುವ ಭಕ್ತಿಸಂಪನ್ನತೆ ಒಂದು ಗುಪ್ತನಿಧಿ. ಅದು 'ನೆಲದ ಮರೆಯ ನಿಧಾನ' ಎನ್ನಬಹುದು. ನಮ್ಮ ಮೈತ್ರಿಯತ್ವದ ಆಪ್ತತೆಗೆ ಇದೂ ಕಾರಣ, ಗುರುವಾಗಿ ಬೇಂದ್ರೆಯವರು, ಗೆಳೆಯರಾಗಿ ಕಣವಿಯವರು ನನ್ನ ವ್ಯಕ್ತಿತ್ವ ವಿಕಸನಕ್ಕೆ ನೆರವಾದವರು. ಅನುಭವ ಪಕ್ವತೆಯತ್ತ ಸಾಗಿದಾಗ ಅನುಭಾವವಾಗುತ್ತದೆ. ಅದು ಕಂಡೂ ಕಾಣದ ಒಂದು ಸ್ಥಿತಿ ಅಷ್ಟೆ. ನನ್ನೊಳಗೆ ಇಷ್ಟನ್ನೂ ಬಿತ್ತಿ, ಬೆಳೆದ ಧಾರವಾಡ ನನ್ನ ಪಾಲಿಗೆ ಸಮೃದ್ಧ ನೆಲ.

- ನಿಮ್ಮ ಅರಿವಿನ ಪರಿಧಿ ಬಿಚ್ಚಿಕೊಳ್ಳುವ ಬಾಲ್ಯದ ಹಂತದಲ್ಲಿ – "ಉತ್ತಮ ಖೇತಿ, ಮಧ್ಯಮ ಬೇಪಾರ, ಕನಿಷ್ಠ ನೌಕರಿ" ಅನ್ನುವ ಒಂದು ಫಾರ್ಮ್ಯುಲಾ ಇತ್ತಂತೆ. ಏನದು? ಅವುಗಳಲ್ಲಿ ನಿಮಗೆ ದಕ್ಕಿದ್ದರ ಬಗ್ಗೆ ಸಂತಸ ಇದೆಯೆ?

'ಉತ್ತಮ ಖೇತಿ, ಮಧ್ಯಮ ವ್ಯಾಪಾರ, ಕನಿಷ್ಠ ನೌಕರಿ; ಇದು ಲೌಕಿಕ ದೃಷ್ಟಿ. ಆದರೆ ಯಾವ ವೃತ್ತಿಯೂ ಸಣ್ಣದಲ್ಲ. ಶರಣರ ದೃಷ್ಟಿಯಲ್ಲಿ ಅದು ಕಾಯಕ. ಬಸವಣ್ಣ ಬಿಜ್ಜಳನಲ್ಲಿ ಮಂತ್ರಿಯಾದದು ನೌಕರಿಯಲ್ಲ. ಅದು ಸತ್ಯಶುದ್ಧ ಕಾಯಕ. 'ಕಾಯಕ' ಶಬ್ದ ಎಲ್ಲ ತರತಮಗಳನ್ನೂ ತೊಡೆದು ಹಾಕುತ್ತದೆ. ಆದರೆ ಅದಕ್ಕೆ ಹಿನ್ನೆಲೆಯಾಗಿ ಬೇಕಾದದ್ದು ಅಚಲವಾದ ಶ್ರದ್ಧೆ ಮತ್ತು ನಿಷ್ಠೆ.

ವೃತ್ತಿಪ್ರಾರಂಭಿಸುವ ಮೊದಲು ನನ್ನಲ್ಲಿಯೂ ಹೊಯ್ದಾಟಗಳಿದ್ದವು. ಕೃಷಿ, ವ್ಯಾಪಾರ– ಎರಡಕ್ಕೂ ನನಗೆ ಪರಂಪರೆಯಿತ್ತು. ನಾನು ಏಳನೆಯ ತರಗತಿಯಲ್ಲಿದ್ದಾಗ ನನ್ನ ಗುರುಗಳು ನನ್ನ ಬರವಣಿಗೆ, ಮಾತು – ಎರಡನ್ನೂ ಗಮನಿಸಿ 'ನೀನ ಒಳ್ಳೆಯ ಮಾಸ್ತರನಾಗುತ್ತಿ' ಅನ್ನುತ್ತಿದ್ದರು. ಸ್ವಾತಂತ್ರ್ಯಪೂರ್ವದ ಆ ಕಾಲ, ನನ್ನ ಮುಲ್ಕೀ ಪರೀಕ್ಷೆಯ ಫಲಿತಾಂಶದ ಮೇಲೆ ನನಗೆ ಮಾಸ್ತರಿಕೆ ದೊರೆಯಿತು. ಅದು 1945ನೆಯ ಇಸ್ವಿ. ಮಾಸ್ತರ ವೃತ್ತಿಯೆಂದರೆ ನಿರಂತರ ವಿದ್ಯಾರ್ಥಿಯಾಗುವ ವೃತ್ತಿ, ನಾನು ಬದುಕಿನುದ್ದಕ್ಕೂ ಅಭ್ಯಾಸಿಯೇ. ಅಚ್ಚರಿಯೆಂದರೆ 'ಉತ್ತಮ ಖೇತಿ, ಮಧ್ಯಮ ವ್ಯಾಪಾರ, ಕನಿಷ್ಠ ನೌಕರಿ' ಎನ್ನುವ ಪರಂಪರಾಗತ ಫಾರ್ಮ್ಯುಲಾ ಏನಿದೆಯಲ್ಲ, ಈ ಮೂರನ್ನೂ ಸಮನ್ವಯಗೊಳಿಸುವ ಹಾಗೆ ನನ್ನ ಬದುಕು ರೂಪುಗೊಂಡದ್ದು.

- ಕನ್ನಡ ಸಾಲಿ ಮಾಸ್ತರಿಕೆಯಿಂದ ಆರಂಭವಾಗಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಆಡಳಿತಾಧಿಕಾರಿ ಹುದ್ದೆಯ ವರೆಗೂ ಸಾಗಿ ಬಂದ ನಿಮ್ಮ ಬದುಕಿನ ಪಯಣ ನಿಮಗೆ ಕೊಟ್ಟ ಅನುಭವ ಎಂಥದ್ದು?